# ನಾನು ಮಕ್ಕಳಿಂದ ಕಲಿತ ಸಂಗತಿಗಳು

**-ನೇಹಾ ಮಿಶ್ರಾ**

ಶಿಕ್ಷಕಿಯಾಗಿ ಮಕ್ಕಳೊಂದಿಗೆ ಕೆಲಸ ಮಾಡುತ್ತಿರುವ ನನ್ನ ಮೊದಲ ಅನುಭವ ಇದು. ಅದು ಯುಕೆಜಿ ತರಗತಿ. ಅಲ್ಲಿ ನಾಲ್ಕೂವರೆಯಿಂದ ಐದು ವರ್ಷ ವಯಸ್ಸಿನ ಹತ್ತು ಮಂದಿ ಮಕ್ಕಳಿದ್ದರು. ನಾನು ಇಡೀ ದಿನ ಅವರೊಂದಿಗೇ ಕಳೆಯುತ್ತಿದ್ದೆ. ಮಕ್ಕಳೊಂದಿಗೆ ಔಪಚಾರಿಕ ಹಾಗೂ ಅನೌಪಚಾರಿಕವಾಗಿ ಮಾತನಾಡುವುದು, ಹತ್ತು ಹಲವು ಚಟುವಟಿಕೆಗಳೊಂದಿಗೆ ಭಾಗವಹಿಸುವುದು ನನ್ನ ಕೆಲಸವಾಗಿತ್ತು. ಹಾಗಾಗಿ ಈ ಒಡನಾಟದಿಂದ ದಿನವಿಡೀ ಅವರನ್ನು ಹತ್ತಿರದಿಂದ ಅರ್ಥ ಮಾಡಿಕೊಳ್ಳಲು ಸಾಕಷ್ಟು ಅವಕಾಶ ಲಭ್ಯವಾಗುತ್ತಿತ್ತು. ನಾನೇನೂ ವರ್ಷಗಳಿಂದ ಈ ಮಕ್ಕಳೊಂದಿಗೆ ಕೆಲಸ ಮಾಡುತ್ತಿಲ್ಲ. ಕೇವಲ ಆರು ತಿಂಗಳಾಯಿತಷ್ಟೇ. ಆದರೆ ಪ್ರತಿದಿನ ಈ ಪುಟಾಣಿ ಮಕ್ಕಳ ಜೊತೆಗೆ ಸಿಗುವ ಹೊಸ ಅನುಭವವಿದೆಯಲ್ಲ, ಅದರಿಂದ ಮಕ್ಕಳನ್ನು ಇನ್ನಷ್ಟು ಮತ್ತಷ್ಟು ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಹೀಗೆ ನಿರಂತರವಾಗಿ ಮಕ್ಕಳೊಂದಿಗೆ ಬೆರೆತು ಕೆಲಸ ಮಾಡುವುದರಿಂದ ಅನೇಕ ಸಂಗತಿಗಳು ನನ್ನ ಅರಿವಿಗೆ ಬರುತ್ತ ಹೋದವು. ದೊಡ್ಡವರಾದ ನಮಗೆ ಮಕ್ಕಳ ಬಗ್ಗೆ ಸಾಕಷ್ಟು ತಪ್ಪು ಗ್ರಹಿಕೆಗಳಿರುತ್ತವೆ ಎಂಬುದು ಕೂಡ ಅರಿವಿಗೆ ಬಂತು. ಮಕ್ಕಳನ್ನು ನಿಕಟವಾಗಿ ಅರ್ಥಮಾಡಿಕೊಳ್ಳುವುದು ಹೇಗೆ ಮತ್ತು ಅನೇಕ ತಪ್ಪು ಗ್ರಹಿಕೆಗಳನ್ನು ಮೀರುವುದು ಹೇಗೆ ಎಂಬುದನ್ನು ಈ ಲೇಖನದ ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದೇನೆ.

ಶಾಲೆಗೆ ಹೋಗುವುದು ಅಂದಾಕ್ಷಣ ಮಕ್ಕಳು ರಂಪಾಟ ಮಾಡುತ್ತ ಅಳಲು ಶುರುಮಾಡುತ್ತಾರೆ. ಇದು ನಮಗೆ ಸಾಮಾನ್ಯವಾದ ವಿದ್ಯಮಾನ. ಅಲ್ಲಿಯವರೆಗೂ ಮಕ್ಕಳು ಸಂಪೂರ್ಣವಾಗಿ ಮನೆಗೇ ಮತ್ತು ಅಲ್ಲಿನ ಜನಕ್ಕೆ ಅಂಟಿಕೊಂಡಿರುತ್ತಾರೆ. ಏಕಾಏಕಿ ಅವರನ್ನು ಬಲವಂತವಾಗಿ ಶಾಲೆಗೆ ತಂದು ಕೂರಿಸುತ್ತಾರೆ. ಅದು ಅವುಗಳ ಮಟ್ಟಿಗೆ ಏನೂ ಅರಿಯದ ಅನ್ಯಗ್ರಹದಂತೆ ಭಾಸವಾಗುತ್ತದೆ. ಆ ಕ್ಲಾಸ್ ರೂಂನಲ್ಲಿ ಮಕ್ಕಳಿಗೆ ಆಪ್ತವಾಗುವ ಸಂಗತಿಗಳು ಕೆಲವೇ ಕೆಲವು. ಹಾಗಾಗಿ ಮಕ್ಕಳು ಅಳಲು ಶುರುಮಾಡುತ್ತವೆ. ಆದರೆ ನಾವಾದರೂ ಏನು ಮಾಡುತ್ತೇವೆ? ಬೆದರಿಸುತ್ತೇವೆ-ಗದರಿಸುತ್ತೇವೆ, ಕ್ಲಾಸಿನಲ್ಲಿ ಸುಮ್ಮನೇ ಕುಳಿತುಕೊಳ್ಳಲು ಏನು ಬೇಕೋ ಅವೆಲ್ಲ ಅಸ್ತ್ರಗಳನ್ನು ಪ್ರಯೋಗ ಮಾಡುತ್ತೇವೆ. ಹಾಗಾದರೆ ಇಂತಹ ವಾತಾವರಣದಲ್ಲಿ ಕಲಿಕೆ ಎನ್ನುವುದು ಹರ್ಷದಾಯಕ ಹಾಗೂ ಪ್ರಶಾಂತದಾಯಕ ಪ್ರಕ್ರಿಯೆ ಆಗಿರಲು ಸಾಧ್ಯವೇ?

ಮಕ್ಕಳಿಗೆ ಖುಷಿ ಖುಷಿಯಾದ ವಾತಾವರಣವನ್ನು ನೀಡಿದರೆ ಮಾತ್ರ ಅವರು ಕಲಿಕೆಯಲ್ಲಿ ಸಹಜವಾಗಿ ಆಸಕ್ತಿಯನ್ನು ತಳೆಯುತ್ತಾರೆ ಎಂಬುದು ನಾನು ಕಲಿತುಕೊಂಡ ಸಂಗತಿ. ಹಾಗಾದಾಗ ಅವರಿಗೆ ಶಾಲೆಯೇ ನಿಜವಾದ ಸ್ವರ್ಗ, ಅವರೆಂದಿಗೂ ಶಾಲೆಯನ್ನು ತೊರೆಯಲು ಇಷ್ಟಪಡುವುದಿಲ್ಲ. ನಾನು ಬೋಧನೆಯನ್ನು ಆರಂಭಿಸಿದ ದಿನಗಳಲ್ಲಿ 'ಮಕ್ಕಳು ಚಿಕ್ಕವಲ್ಲವೇ, ಅದಕ್ಕೇ ಅಳುತ್ತವೆ' ಎಂಬ ಅಭಿಪ್ರಾಯ ನನ್ನದೂ ಆಗಿತ್ತು. ಆದರೆ ಶಾಲೆಯಲ್ಲಿ ಸ್ನೇಹಮಯವಾದ ವಾತಾವರಣವಿದ್ದರೆ ಹಾಗೂ ಅವರು ಶಾಲೆಯಲ್ಲಿ ತಮ್ಮ ಮನೆಯನ್ನು ಕಾಣುವಂತಾದರೆ ದಿನವೂ ತಪ್ಪದೆ ಅವರು ಶಾಲೆಗೆ ಬರುತ್ತಾರೆ ಎಂಬುದು ನನ್ನ ಅರಿವಿಗೆ ಬಂತು.

ನನ್ನ ತರಗತಿಯ ಮೊದಲ ದಿನದ ಅನುಭವ ಈಗಲೂ ನೆನಪಿದೆ. ಒಂದು ಮಗು ಜೋರಾಗಿ ಅಳುತ್ತ ಕ್ಲಾಸಿಗೆ ಬಂತು. ಆ ಮಗುವಿನ ಅಪ್ಪ ಆತನನ್ನು ಅತ್ಯಂತ ಕಷ್ಟದಿಂದ ಶಾಲೆಗೆ ಕರೆತಂದು ತರಗತಿಯೊಳಗೆ ಬಿಟ್ಟಿದ್ದರು. ಆದರೆ ಅಚ್ಚರಿ ಏನಾಯಿತು ಗೊತ್ತಾ? ಅದೇ ದಿನ ಮಗು ಶಾಲೆ ಬಿಟ್ಟು ಮರಳಿ ಮನೆಗೆ ಹೋಗಲಿಕ್ಕೇ ಕೇಳಲಿಲ್ಲ! ತರಗತಿಯಲ್ಲಿ ಆಕರ್ಷಕವಾದ ವಾತಾವರಣವಿತ್ತು, ಮಕ್ಕಳನ್ನು ಸೆಳೆಯುವಂತಹ ಆಟಿಕೆಗಳಿದ್ದವು ಎನ್ನುವುದೇನೋ ಸರಿ. ಈ ಕಾರಣಕ್ಕೇ ಮಗು ಮರಳಿ ಮನೆಗೆ ಹೋಗಲು ಇಷ್ಟಪಡುತ್ತಿಲ್ಲ ಎಂಬುದೂ ನನ್ನ ಊಹೆಯಾಗಿತ್ತು. ಆದರೆ ಇದೆಲ್ಲಕ್ಕಿಂತ ಮುಖ್ಯವಾದ ಸಂಗತಿಯಿತ್ತು. ಆಟವಾಡುವಾಗ ಮತ್ತು ತಿಂಡಿ ತಿನ್ನುವ ವೇಳೆಯಲ್ಲಿ ಮಗು ಬಾಯಿ ತುಂಬಾ ಮಾತನಾಡುತ್ತಿತ್ತು. ಆದರೆ ನಾವು ಹಾಡು ಹಾಡಿದಾಗ ಅಥವಾ ಸರ್ಕಲ್ ಟೈಮ್ ನಲ್ಲಿ / ವೃತ್ತದ ಸಮಯದಲ್ಲಿ ಏನಾದರು ಕೇಳಿದಾಗ ಮಾತ್ರ ಆ ಮಗು ಇದ್ದಕ್ಕಿದ್ದಂತೆ ಭಯಗೊಳ್ಳುತ್ತಿದ್ದದು ನನ್ನ ಗಮನಕ್ಕೆ ಬಂದಿತು. ಇದಕ್ಕೆ ಕಾರಣ ಕಂಡುಕೊಳ್ಳಲು ನಾನು ಆತನ ತಾಯಿಯ ಜೊತೆ ಮಾತನಾಡಿದೆ. ಶಾಲಾ ಜೀವನ ಅಭ್ಯಾಸವಾಗಲಿ ಎಂದು ಅವರು ಆ ಮಗುವನ್ನು ಟ್ಯೂಶನ್ ಗೆ ಕಳಿಸುತ್ತಿದ್ದರು. ಅಲ್ಲಿ ಆತನಿಗೆ ದಿನವೂ ಹೊಡೆಯುತ್ತಿದ್ದರು. ಹಾಗಾಗಿ ಅಲ್ಲಿಗೆ ನನ್ನನ್ನು ಕಳಿಸಬೇಡ ಎಂದು ಮಗು ಕೈಮುಗಿದು ಕೇಳುತ್ತಿತ್ತು ಎಂಬುದು ನನಗೆ ತಿಳಿಯಿತು.

'ಮಕ್ಕಳನ್ನು ಹೊಡೆದೇ ಸರಿ ಮಾಡಬೇಕು, ಹಾಗೆ ಮಾಡಿದರೆ ಮಾತ್ರ ಅವು ಕಲಿಯುತ್ತವೆ. ನಾನು ಹೀಗೇ ಅನೇಕ ಮಕ್ಕಳನ್ನು ಸರಿಮಾಡಿದ್ದೇನೆ. ಇವನೂ ಹಾಗೇ ಸರಿಹೋಗುತ್ತಾನೆ ಬಿಡಿ' ಎಂದು ಆ ಟ್ಯೂಶನ್ ಮೇಡಂ ಹೇಳುತ್ತಿದ್ದರಂತೆ. ನನಗೆ ನಿಜಕ್ಕೂ ದಿಗ್ಭ್ರಮೆಯಾಯಿತು. ಮಗು ತಾನಾಗಿಯೇ ಕಲಿಯಲು ಸಿದ್ಧವಿರುವಾಗ ಆ ಮೇಡಂಗೆ ಯಾವ ರೀತಿಯ ಸುಧಾರಣೆ

ಬೇಕಾಗಿದೆ ಎಂಬುದೇ ನನಗೆ ಅರ್ಥವಾಗಲಿಲ್ಲ. ನಮ್ಮ ಮಾತುಕತೆಯ ಬಳಿಕ ಆ ತಾಯಿ ತನ್ನ ಮಗುವನ್ನು ಟ್ಯೂಷನ್ ಗೆ ಕಳುಹಿಸುವುದನ್ನು ನಿಲ್ಲಿಸಿದರು ಎನ್ನುವುದು ಬೇರೇ ಮಾತು. ಈ ಹಿಂದೆ ಟ್ಯೂಷನ್ ಗೆ ಹೋಗುವುದೆಂದರೆ ಮಗು ಅಳುವುದು, ಗಲಾಟೆ ಮಾಡುವುದು ಸಾಮಾನ್ಯವಾಗಿತ್ತು. ಈಗ ಮಗು ತಾನಾಗಿಯೇ ಶಾಲೆಗೆ ಹೋಗಲು ಸಿದ್ಧವಾಗುತ್ತದೆ ಎಂದು ಅವನ ತಾಯಿ ಹೇಳಿದರು. ಆಗಿನ್ನೂ ನಾಲ್ಕೂವರೆ ವರ್ಷದ ಪುಟ್ಟ ಮಗುವಿಗೆ ಬೆಳಿಗ್ಗೆ ಶಾಲೆಗೆ ಹೋಗಬೇಕೆಂದರೆ ಯಾರೂ ಡ್ರೆಸ್ ಮಾಡಿಸಬೇಕಿಲ್ಲ, ಎಲ್ಲವನ್ನೂ ಅದೇ ಮಾಡಿಕೊಳ್ಳುತ್ತದೆ. ಮನೆಯವರು ಎಲ್ಲಾದರೂ ಹೊರಗಡೆ ಹೋಗಬೇಕಿದ್ದು ಮಗು ಶಾಲೆಗೆ ರಜೆ ಹಾಕಬೇಕಾಗಿದ್ದರೆ ಮೊದಲು ಶಾಲೆಗೆ ಮಾಹಿತಿ ನೀಡಬೇಕು, ಆ ಬಳಿಕವಷ್ಟೇ ಅಜ್ಜಿ ಮನೆಗೋ ಇನ್ನೆಲ್ಲಿಗಾದರೂ ಹೋಗಲು ತೊಂದರೆ ಇಲ್ಲ ಎಂದು ಮಗು ತಾಕೀತು ಮಾಡುತ್ತದೆ ಎಂದು ಆ ಮಗುವಿನ ತಾಯಿ ನನ್ನ ಬಳಿ ಹೇಳಿಕೊಂಡಿದ್ದರು. ಇದೆಲ್ಲದಕ್ಕೆ ಆಕರ್ಷಕ ಕ್ಲಾಸ್ ರೂಮ್ ಮಾತ್ರ ಕಾರಣವಲ್ಲ, ಭಯ ಮುಕ್ತವಾದ ವಾತಾವರಣ, ಮಗುವಿಗೆ ಸಿಗುವ ಗೌರವ ಮತ್ತು ಮಾನ್ಯತೆ ಎಲ್ಲವೂ ಕಾರಣ ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಾಗಿಲ್ಲ.

ಈ ಮಗುವಿನ ಬಗ್ಗೆ ಇನ್ನೊಂದು ಉದಾಹರಣೆಯನ್ನು ಕೂಡ ನೀವು ಗಮನಿಸಬೇಕು. ಈತ ಕಳೆದ ಅನೇಕ ದಿನಗಳಿಂದ ತನ್ನ ಹೆಸರನ್ನು ಬರೆಯಲು ಪ್ರಯತ್ನ ಮಾಡುತ್ತಲೇ ಇದ್ದ. ಈ ಶಾಲೆಗೆ ಮಕ್ಕಳು ಬರುವುದಕ್ಕೆ ಮೊದಲು ಅವರ ಹೆಸರುಗಳನ್ನು ಅವರ ಅಲ್ಮೆರಾ ಮೇಲೆ ಬರೆದಿಡಲಾಗುತ್ತದೆ. ಅದರಲ್ಲಿ ಕೈಯಲ್ಲೇ ಮಾಡಲಾದ ಫೋಲ್ಡರ್ ಗಳು ಇರುತ್ತಿದ್ದವು, ಆ ಫೋಲ್ಡರ್ ನಲ್ಲಿ ಚಿತ್ರಗಳು, ಸ್ಲೇಟ್ ಮತ್ತು ಒಂದು ಕಾರ್ಡ್ ಇರುತ್ತಿತ್ತು. ಅವುಗಳಿಗೂ ಹೆಸರು ಮತ್ತು ಚಿತ್ರಗಳನ್ನು ಅಂಟಿಸಲಾಗಿತ್ತು. ಮಕ್ಕಳು ಪರಸ್ಪರ ಪರಿಚಯ ಮಾಡಿಕೊಂಡ ಮೊದಲ ದಿನವೇ ಪ್ರತಿಯೊಬ್ಬರಿಗೂ ಇವನ್ನೆಲ್ಲ ನೀಡಲಾಗುತ್ತದೆ. ಮಕ್ಕಳು ತಮ್ಮ ಹೆಸರುಗಳನ್ನು ಬರೆಯುವುದನ್ನು ಬಿಟ್ಟರೆ ಯಾವುದೇ ಪ್ರತ್ಯೇಕ ಚಟುವಟಿಕೆಗಳನ್ನು ಅವರಿಗೆ ನೀಡಲಾಗಿರಲಿಲ್ಲ. ಕೆಲವು ದಿನಗಳಲ್ಲಿಯೇ ಮಕ್ಕಳು ತಮ್ಮ ಹೆಸರುಗಳನ್ನು ಎಲ್ಲೆಂದರಲ್ಲಿ ಬರೆಯಲು ಶುರುಮಾಡಿದ್ದರು. ಯಾವುದೇ ಕೆಲಸವನ್ನು ಮಾಡುವುದಕ್ಕೆ ಮುನ್ನ ಅವರು ತಮ್ಮ ಹೆಸರುಗಳನ್ನು ಬರೆಯುತ್ತಿದ್ದರು. ಅವರಿಗೆ ಇದು ತಮ್ಮ ಹೆಸರು ಎಂಬುದು ಗೊತ್ತಿದ್ದರೂ ಕೂಡ ಅದನ್ನು ಬರೆಯುವುದರಲ್ಲಿ ಖುಷಿ ಸಿಗುತ್ತಿತ್ತು ಅನಿಸುತ್ತದೆ. ಈ ಮಗು ಮಾತ್ರ ಕಾಪಿ ಮಾಡಿ ತನ್ನ ಹೆಸರನ್ನು ಬರೆಯುತ್ತಿತ್ತು. ಅನೇಕ ದಿನಗಳು ಹೀಗೇ ಕಳೆದವು. ಒಂದು ದಿನ ಕಾಪಿ ಮಾಡದೇ, ತನ್ನ ಹೆಸರನ್ನು ನೋಡದೆ ಬರೆಯುವಲ್ಲಿ ಯಶಸ್ವಿಯಾಗಿಬಿಟ್ಟಿತು. ಆಗ ಮಗುವಿಗೆ ಎಲ್ಲಿಲ್ಲದ ಖುಷಿ- "ಓಹ್, ನೋಡಿ ಇವತ್ತಿನ ಮಜಾ, ನಾನು ನನ್ನ ಹೆಸರನ್ನು

ನೋಡದೇ ಬರೆದುಬಿಟ್ಟೆ" ಎಂದು ತರಗತಿಯಲ್ಲಿ ಗಟ್ಟಿಯಾಗಿ ಕೂಗಿ ಹೇಳಿತು! ನಾವೆಲ್ಲ ಚಪ್ಪಾಳೆ ತಟ್ಟಿ ಸಂಭ್ರಮಿಸಿದೆವು. ಕ್ಲಾಸಿನಲ್ಲಿ ಆ ಮಗುವನ್ನು ಗೌರವಿಸಿದಾಗ ತಾನೂ ಕೂಡ ಈ ತರಗತಿಯಲ್ಲಿ ಮುಖ್ಯ, ತನಗೂ ಒಂದು ಅಸ್ತಿತ್ವವಿದೆ, ನಾನು ಕೇವಲ ಎಲ್ಲರಲ್ಲಿ ಒಂದಲ್ಲ ಎಂಬ ಭಾವನೆ ಮೂಡಿತು. ಈ ಕಾರಣದಿಂದ ಅದು ಶಾಲೆಯನ್ನು ಮತ್ತು ಅಧ್ಯಯನವನ್ನು ಇಷ್ಟಪಡುವ ಪರಿಪಾಠವನ್ನು ಬೆಳೆಸಿಕೊಂಡಿತು. ಇದು ಅದೊಂದೆ ಮಗುವಿನ ಉದಾಹರಣೆಯಲ್ಲ, ಬಹುತೇಕ ಎಲ್ಲ ಮಕ್ಕಳೂ ಇದನ್ನು ಮಾಡುತ್ತವೆ. ಮಕ್ಕಳು ಇಷ್ಟೊಂದು ಸಹಜವಾಗಿ ಕಲಿಯುತ್ತಿರುವುದರಿಂದ ನಾವು ಯಾಕೆ ಅನಗತ್ಯವಾದ ಒತ್ತಡ ಹೇರುತ್ತೇವೆ ಎಂಬುದು ನನ್ನ ಪಾಲಿನ ಅಚ್ಚರಿ.

ಮಕ್ಕಳನ್ನು ನಾವು ಯಾವ ರೀತಿ ನಡೆಸಿಕೊಳ್ಳುತ್ತೇವೆ ಎಂಬುದು ಮುಖ್ಯ. ಅದು ಕೆಟ್ಟದೋ, ಒಳ್ಳೆಯದೋ ಅವರು ಆ ಬಗ್ಗೆ ಆಳವಾಗಿ ಯೋಚನೆ ಮಾಡುತ್ತಾರೆ. ಅವರಿಗೆ ಇವನ್ನೆಲ್ಲ ವ್ಯಕ್ತಪಡಿಸಲು ಸರಿಯಾದ ಭಾಷೆ ಗೊತ್ತಿಲ್ಲದೇ ಇರಬಹುದು, ಆದರೆ ಅವರಿಗೆ ತಮ್ಮನ್ನು ಹೇಗೆ ನಡೆಸಿಕೊಳ್ಳಲಾಗುತ್ತಿದೆ ಎಂಬುದರ ಬಗ್ಗೆ ಅವರದ್ದೇ ಆದ ಯೋಚನೆಗಳಿರುತ್ತವೆ ಎನ್ನುವುದು ಮಾತ್ರ ನಿಶ್ಚಿತ. ಒಂದು ದಿನ ಮಗು ನನ್ನ ಬಳಿ ಹೇಳಿದ ಮಾತು ನನಗೆ ಈಗಲೂ ನೆನಪಿದೆ; ಶಾಲೆಗೆ ಎರಡು ದಿನ ರಜೆ ಇದ್ದರೂ ನನಗೆ ಇಷ್ಟವಾಗುವುದಿಲ್ಲ, ನನಗೆ ಪ್ರತಿದಿನ ಶಾಲೆಗೆ ಬರುವುದೆಂದರೆ ಅಚ್ಚುಮೆಚ್ಚು ಎಂದು ಆ ಮಗು ಹೇಳಿತ್ತು. ಏನಪ್ಪಾ ಇದಕ್ಕೆ ಕಾರಣ ಎಂದು ಆ ಮಗುವನ್ನು ನಗುತ್ತಾ ಕೇಳಿದೆ; "ಈ ಶಾಲೆಗೆ ಬರುವುದಕ್ಕೂ ಮೊದಲು ನಾನು ಅಂಗನವಾಡಿಗೆ ಹೋಗುತ್ತಿದ್ದೆ. ಅದು ಚೆನ್ನಾಗಿಯೇ ಇರಲಿಲ್ಲ. ಅಲ್ಲಿ ಎರಡೇ ಎರಡು ಆಟದ ಸಾಮಾನುಗಳಿದ್ದವು. ಅದಲ್ಲದೇ ಅಲ್ಲಿರುವ ಟೀಚರು ಯಾವಗಲೂ ನನಗೆ ಹೊಡೆಯುತ್ತಿದ್ದರು. ಅವರ ಬಳಿ ಎರಡು ಕೋಲುಗಳಿದ್ದವು. ಒಂದು ದೊಡ್ಡದು ಮತ್ತು ಇನ್ನೊಂದು ಚಿಕ್ಕದು. ಆ ಚಿಕ್ಕ ಕೋಲಿನಲ್ಲಿ ಹೊಡೆದರೆ ಭಾರೀ ನೋವಾಗುತ್ತಿತ್ತು" ಎಂದು ಆ ಮಗು ಮುಗ್ಧವಾಗಿ ಹೇಳಿತ್ತು.

"ನಿನಗೆ ಕ್ಲಾಸಿನಲ್ಲಿ ಯಾರಾದರೂ ಹೊಡೆದರಾ?" ಎಂದು ನಾನು ಕೇಳಿದೆ.

"ಹೌದು ಮ್ಯಾಮ್, ನಾವು ಮಾತನಾಡಿದ್ರೂ ಹೊಡೆಯುತ್ತಿದ್ದರು. ಯಾರೇ ಆಗಲಿ ಮಾತನಾಡುವ ಹಾಗಿರಲಿಲ್ಲ. ಅವರಿಗೆ ಕೋಲಿನಲ್ಲಿ ಹೊಡೆಯುತ್ತಿದ್ದರು," ಎಂದು ಆ ಮಗು ಹೇಳಿತು. ಆ ಮಗುವಿಗಿನ್ನೂ ಐದು ವರ್ಷ ವಯಸ್ಸು.

"ಯಾವುದಾದರೂ ಮಗು ಅಳುತ್ತ ಬಂದರೆ ಕೋಲು ತಾ ಎಂದು ಆ ಟೀಚರ್ ಹೇಳುತ್ತಿದ್ದರು. ತತ್‌ಕ್ಷಣ ಮಗು ಅಳುವುದನ್ನು ನಿಲ್ಲಿಸುತ್ತಿತ್ತು. ಯಾರಾದರೂ

ಅಳು ನಿಲ್ಲಿಸದೇ ಇದ್ದರೆ ಅವರು ಆ ಕೋಲಿನಿಂದ ಹೊಡೆಯುತ್ತಿದ್ದರು. ನಮಗೆ ತುಂಬ ಬೇಜಾರಾಗುತ್ತಿತ್ತು. ನಾವು ಮಾತನಾಡಿದರೆ ಯಾಕೆ ಹೊಡೆಯುತ್ತಾರೆ ಎಂಬುದೇ ನನಗೆ ಅರ್ಥವಾಗುತ್ತಿರಲಿಲ್ಲ" ಎಂದು ಆತ ಹೇಳಿದ್ದ.

"ನಿನಗೆ ಈ ಶಾಲೆಗೆ ಬರಲು ಭಯ ಆಗಲಿಲ್ಲವೇ?" ಎಂದು ಆತನನ್ನು ಮರು ಪ್ರಶ್ನೆ ಮಾಡಿದ್ದೆ.

"ನನಗೆ ತುಂಬ ಭಯ ಆಗಿತ್ತು. ಈ ಕ್ಲಾಸಿಗೆ ಬಂದಾಗ ನನ್ನ ಕಣ್ಣು ತುಂಬ ನೀರು ತುಂಬಿಕೊಂಡಿತ್ತು. ಆದರೆ ನಾನು ಅಳುತ್ತಿರಲಿಲ್ಲ" ಎಂದಿತು ಮಗು. ನಾನು ಅವನನ್ನು ತಪ್ಪಾಗಿ ಅರ್ಥಮಾಡಿಕೊಂಡಿರಬಹುದು ಎಂದು ಮತ್ತೆ ಕೇಳಿದೆ, "ಓಹ್, ಹಾಗಾದರೆ ನೀನು ಮೊದಲ ಬಾರಿಗೆ ಶಾಲೆಗೆ ಬಂದಾಗ ಭಯಗೊಂಡಿದ್ದರಿಂದ ಅಳುತ್ತಿದ್ದಿಯಾ?"

"ಇಲ್ಲ, ನನ್ನ ಕಣ್ಣುಗಳಲ್ಲಿ ನೀರು ತುಂಬಿತ್ತು, ಆದರೆ ನಾನು ಅಳುತ್ತಿರಲಿಲ್ಲ. ಯಾಕೆಂದರೆ ನಾನು ಖುಷಿಯಾಗಿದ್ದೆ. ಕ್ಲಾಸು ತುಂಬ ಚೆಂದವಿತ್ತು. ಇಲ್ಲಿ ಅನೇಕ ಆಟದ ಸಾಮಾನುಗಳಿದ್ದವು. ಹಾಗಾಗಿ ನನಗೆ ಇಷ್ಟವಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಕ್ಲಾಸಿನಲ್ಲಿ ಕೋಲುಗಳಿದ್ದವೇ ಎಂದು ಮೊದಲು ಹುಡುಕಾಡಿದೆ. ಇಲ್ಲಿ ಕೋಲುಗಳು ಇರಲಿಲ್ಲ. ಅದಕ್ಕೇ ಭಾರೀ ಖುಷಿಯಾಯಿತು" ಎಂದು ಆತ ಹೇಳಿದ.

ಆತ ಇವೆಲ್ಲ ಭಾವನೆಗಳನ್ನು ಒಮ್ಮೆಗೇ ಹೇಳಿರಲಿಲ್ಲ. ಬಹಳ ಕಾಲ ಆತನ ಜೊತೆ ಮತ್ತೆ ಮತ್ತೆ ಮಾತನಾಡಿದ ಬಳಿಕ ಈ ಎಲ್ಲ ಅಭಿಪ್ರಾಯಗಳನ್ನು ಬಿಡಿಬಿಡಿಯಾಗಿ, ತನ್ನದೇ ಭಾಷೆಯಲ್ಲಿ ಹಂಚಿಕೊಂಡ. ಅವೆಲ್ಲವೂ ಇಲ್ಲಿ ಮುಖ್ಯವಲ್ಲ ಬಿಡಿ. ಮುಖ್ಯ ಸಂಗತಿ ಏನೆಂದರೆ ಮಗು ಇವೆಲ್ಲವನ್ನೂ ಹೇಗೆ ಮನಸ್ಸಿಗೆ ಆಳವಾಗಿ ಹಚ್ಚಿಕೊಂಡಿತ್ತು ಎಂಬುದು. ಇನ್ನೊಂದು ಶಾಲೆಯಿಂದ ಇಲ್ಲಿಗೆ ಬಂದಿದ್ದ ಮತ್ತೊಬ್ಬಳು ಹುಡುಗಿ ನನ್ನ ಜೊತೆ ಮಾತನಾಡುತ್ತ, "ಆ ಶಾಲೆಯ ಎ ಬಿ ಸಿ ಡಿ ಮ್ಯಾಡಂ ಯಾವಗಲೂ ಹೊಡೆಯುತ್ತಿದ್ದರು. 1, 2, 3 ಮೇಡಂ ಕೂಡ ಹೊಡೆಯುತ್ತಿದ್ದರು. ಇನ್ನೊಬ್ಬರು ಕುಳ್ಳಗಿನ ಮೇಡಂ ಇದ್ದರು, ಅವರೂ ಸಹ ಹೊಡೆಯದೇ ಬಿಡುತ್ತಿರಲಿಲ್ಲ. ನಾವು ಚೆನ್ನಾಗಿ ಬರೆಯದೇ ಹೋದರೆ ಹೊಡೆಯುತ್ತಿದ್ದರು," ಎಂದು ಆಕೆ ಹೇಳಿದ್ದಳು. ದೊಡ್ಡವರ ನಡವಳಿಕೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗಲೆಲ್ಲ ಮಕ್ಕಳು ಈ ರೀತಿಯ ಅನೇಕ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು. ಇಂತಹ ವಿಷಯಗಳ ಬಗ್ಗೆ ನಾನಾ ರೀತಿಯ ಚರ್ಚೆ ನಡೆಯುತ್ತಿದ್ದರೂ ಕೂಡ ನನಗೆ ನಿಜಕ್ಕೂ ಮುಖ್ಯವಾಗುವುದು ಏನೆಂದರೆ ಮಕ್ಕಳು ತಮ್ಮ ಸುತ್ತಮುತ್ತ ನಡೆಯುವ

ಸಂಗತಿಗಳನ್ನು ಎಷ್ಟು ಗಂಭೀರವಾಗಿ ಯೋಚಿಸುತ್ತಾರೆ ಮತ್ತು ಆ ಬಗ್ಗೆ ಪ್ರತಿಕ್ರಿಯೆ ನೀಡುತ್ತಾರೆ ಎಂಬುದು. ಮಕ್ಕಳಿಗೆ ಇವನ್ನೆಲ್ಲ ಹೇಳಲು ಸರಿಯಾದ ಭಾಷೆ ಗೊತ್ತಿಲ್ಲದೇ ಇರಬಹುದು, ಆದರೆ ಅವರಿಗೆ ಎಲ್ಲ ಭಾವನೆಗಳೂ ಇವೆ. ಅವಕಾಶವನ್ನು ಕೊಟ್ಟರೆ ಎಲ್ಲವನ್ನೂ ವ್ಯಕ್ತಪಡಿಸಬಲ್ಲರು. ದೊಡ್ಡವರಾದ ನಾವು ಎಲ್ಲವನ್ನೂ ಎಚ್ಚರಿಕೆಯಿಂದ ಕೇಳಬೇಕು ಅಷ್ಟೇ.

ನಾನು  ಬೋಧನ ಕಾರ್ಯದಲ್ಲಿ ತೊಡಗಿಕೊಂಡಾಗ ತರಗತಿ ಕೊಠಡಿಯಲ್ಲಿ ಇರಿಸಲಾಗಿದ್ದ ಎಲ್ಲ ಸಾಮಗ್ರಿಗಳನ್ನು ಮಕ್ಕಳ ಸುಪರ್ದಿಗೆ ವಹಿಸಿಬಿಟ್ಟೆ. ಇದು ಚಿಕ್ಕ ಮಕ್ಕಳಿಗೆ ಸೇರಿದ ಕ್ಲಾಸ್ ರೂಮ್ ಆದ ಕಾರಣ ಅಲ್ಲಿ ಸಾಕಷ್ಟು ಆಟಿಕೆಗಳು ಮತ್ತು ಕಲಿಕಾ ಸಾಮಗ್ರಿಗಳಿದ್ದವು. ಒಂದು ಪುಟ್ಟ  ಲೈಬ್ರೆರಿ ಇತ್ತು. ಅದರಲ್ಲಿ ಸಾಕಷ್ಟು ಪುಸ್ತಕಗಳೂ ಇದ್ದವು. ಈ ತರಗತಿಯು ಪೂರ್ತಿ ನಿಮಗೆ ಸೇರಿದ್ದು, ಇಲ್ಲಿ ಇರುವ ಎಲ್ಲ ವಸ್ತುಗಳು ನಿಮಗೆ ಸೇರಿದ್ದು. ಹಾಗಾಗಿ ಅದನ್ನು ಚೆನ್ನಾಗಿ ಇಟ್ಟುಕೊಳ್ಳುವುದು ನಿಮ್ಮ ಕರ್ತವ್ಯ ಎಂದು ಮೊದಲ ದಿನವೇ ಮಕ್ಕಳಿಗೆ ಹೇಳಿಬಿಟ್ಟಿದ್ದೆ. ಒಂದು ದಿನ ಡಯಟ್ ನಿಂದ (ಡಿಐಇಟಿ)  ಕೆಲವರು ತರಗತಿಯನ್ನು ವೀಕ್ಷಿಸಲು ಬಂದಿದ್ದರು. ಅವರಲ್ಲಿ ಒಬ್ಬರು ಒಂದು ಮಗುವನ್ನು ಕೇಳಿದ್ದರು; ಇಲ್ಲಿರುವ ಆಟಿಕೆಗಳನ್ನು ಮುರಿದು ಹಾಕುತ್ತಿಯಾ ಎಂದು. ಇಲ್ಲಿರುವ ಎಲ್ಲ ಆಟಿಕೆಗಳು ನಮಗೆ ಸೇರಿದ್ದು, ಅವುಗಳನ್ನು ನಾವು ಏಕೆ ಮುರಿದು ಹಾಕುತ್ತೇವೆ ಎಂದು ತತ್‌ಕ್ಷಣವೇ ಆತ ಉತ್ತರ ಕೊಟ್ಟಿದ್ದ. ಆಗ ಮಕ್ಕಳಿಗೆ ಮೊದಲ ದಿನವೇ ಹೇಳಿದ್ದ ಮಾತು ನೆನಪಾಯಿತು. ಅದನ್ನು ಮತ್ತೆ ಮತ್ತೆ ಮಕ್ಕಳಿಗೆ ಹೇಳಬೇಕಾದ ಅಗತ್ಯವೇನೂ ಇರಲಿಲ್ಲ. ಅನೇಕ ಸಂಗತಿಗಳನ್ನು ಮಕ್ಕಳೇ ಮಾತನಾಡಿಕೊಳ್ಳುತ್ತಾರೆ; ಈ ಪುಸ್ತಕ ಹರಿದು ಹೋಗಿದೆ ಅದನ್ನು ಅಂಟಿಸಬೇಕಾಗಿದೆ ಎಂದು. ಯಾವುದೇ ಮಗು ಯಾವುದೇ ವಸ್ತುವನ್ನು ಉದ್ದೇಶಪೂರ್ವಕವಾಗಿ ಹಾಳು ಮಾಡುವುದಿಲ್ಲ. ಈ ಮಾತನ್ನು ನಾನು ಇಲ್ಲಿ ವಿಶೇಷವಾಗಿ ಪ್ರಸ್ತಾವ ಮಾಡುತ್ತಿದ್ದೇನೆ. ಸಾಮಾನ್ಯವಾಗಿ ನಮ್ಮಂತಹ ದೊಡ್ಡವರ ಭಾವನೆ ಏನಿರುತ್ತದೆ ಎಂದರೆ, ಚಿಕ್ಕ ಮಕ್ಕಳು ವಸ್ತುಗಳನ್ನು ಬಹುಬೇಗ ಹಾಳು ಮಾಡುತ್ತಾರೆ ಎಂಬುದು. ಆದರೆ ಈ ಮಕ್ಕಳ ಮೇಲೆ ನಂಬಿಕೆಯನ್ನಿಟ್ಟು ಅವರೊಂದಿಗೆ ದೊಡ್ಡವರಂತೆ ನಡೆದುಕೊಂಡರೆ ಅವರು ಯಾವತ್ತೂ ನಿಮ್ಮನ್ನು ನಿರಾಶೆಗೊಳಿಸುವುದಿಲ್ಲ ಎಂಬುದು ಅವರ ಜೊತೆ ಮಾಡಿದ ನಿರಂತರ ಕೆಲಸ ಮತ್ತು ಮಾತುಕತೆಯ ಬಳಿಕ ನನ್ನ ಅರಿವಿಗೆ ಬಂದ ಸಂಗತಿಯಾಗಿದೆ. ಮಕ್ಕಳನ್ನು ಸಮಾನ ದೃಷ್ಟಿಕೋನದಿಂದ ಮತ್ತು ಗೌರವದಿಂದ ನೋಡಿಕೊಂಡರೆ ಅವರು ತಮ್ಮ ಜವಾಬ್ದಾರಿಯನ್ನು ಎಂದಿಗೂ ಮರೆಯುವುದಿಲ್ಲ. ನನ್ನ ಅನುಭವಕ್ಕೆ ಬಂದ ಇನ್ನೊಂದು ವಿಶೇಷ ಸಂಗತಿ ಎಂದರೆ ಈ ಮಕ್ಕಳನ್ನು 'ಚಿಕ್ಕವರು' ಎಂದು ಹೇಳುವುದನ್ನು ಅವರು

ಇಷ್ಟಪಡುವುದಿಲ್ಲ. ಕೆಲವೊಮ್ಮೆ ದೊಡ್ಡವರು ಮಕ್ಕಳೊಂದಿಗೆ ಮಾತನಾಡುವಾಗ ಉತ್ಪ್ರೇಕ್ಷೆಯಿಂದ, ಮಕ್ಕಳು ಮಾತನಾಡಿದಂತೆ ಅನುಕರಣೆ ಮಾಡುತ್ತಿರುತ್ತಾರೆ. ಇನ್ನು ಕೆಲವು ಬಾರಿ ಕೋಪದಿಂದ ಅಥವಾ ಅಧಿಕಾರಯುತವಾಗಿ ಮಾತನಾಡುತ್ತಾರೆ. ನಾವು ಮಕ್ಕಳೊಂದಿಗೆ ಸಹಜ-ಸಾಮಾನ್ಯ ವಿಧದಲ್ಲಿ ಗೌರವ ಕೊಟ್ಟು ಮಾತನಾಡಿದರೆ ಅವರು ಅದನ್ನು ಗಮನವಿಟ್ಟು ಕೇಳುತ್ತಾರೆ ಮತ್ತು ಅದನ್ನು ಅನುಸರಿಸುತ್ತಾರೆ. ವಿಷಯವನ್ನು ತಾರ್ಕಿಕವಾಗಿ ವಿವರಿಸಿ ಹೇಳಿದರೆ ಅವರು ತುಂಬ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ. ದೊಡ್ಡವರಂತೆ ಮಕ್ಕಳನ್ನು ಪರಿಗಣಿಸಿದರೆ, ಅವರಲ್ಲಿ ನಂಬಿಕೆಯನ್ನು ಇಟ್ಟರೆ, ತರ್ಕಬದ್ಧವಾಗಿ ಮಾತನಾಡಿದರೆ ಮತ್ತು ಉತ್ತೇಜನವನ್ನು ನೀಡಿದರೆ ಅದು ಅವರ ಬೆಳವಣಿಗೆಯಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸುತ್ತದೆ. ಮಕ್ಕಳೊಂದಿಗೆ ಸುಳ್ಳು ನುಡಿಯಬೇಡಿ, ಯಾಕೆಂದರೆ ಅವರು ಅದನ್ನು ಪತ್ತೆ ಮಾಡಿಬಿಡುತ್ತಾರೆ. ಆ ಬಳಿಕ ಅವರು ನಿಮ್ಮನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ.

ಮಕ್ಕಳೊಂದಿಗೆ ಅತ್ಯಂತ ನಿಕಟವಾಗಿ ಕೆಲಸ ಮಾಡಿದ್ದರಿಂದಾಗಿ ಅವರು ತಪ್ಪು ಮಾಡಿದರೆ ಯಾವ ರೀತಿಯಲ್ಲಿ ನಿಭಾಯಿಸಬೇಕು ಎಂಬ ಒಳನೋಟ ಲಭ್ಯವಾಗಿದೆ. ತಪ್ಪು ಮಾಡಿದ್ದಾರೆ ಎಂಬುದು ಮಕ್ಕಳಿಗೆ ಗೊತ್ತಾಗುವಂತೆ ಮಾಡಬೇಕು ಅಥವಾ ಆಕೆಯನ್ನು ಗದರಿಸಬೇಕು ಎಂಬುದು ಸರಿಯಲ್ಲ. ಅಂತಹ ಸಮಯದಲ್ಲಿ ನಾವು ಮೌನವಾಗಿದ್ದು ಅವರ ತಪ್ಪುಗಳ ಬಗ್ಗೆ ಯೋಚಿಸಲು ಅವಕಾಶ ಮಾಡಿಕೊಡಬೇಕು. ಒಂದು ದಿನ ಆಟವಾಡುತ್ತಿದ್ದಾಗ ಇತರ ಇಬ್ಬರು ಹೆಣ್ಣುಮಕ್ಕಳ ತಪ್ಪಿನಿಂದಾಗಿ ಒಂದು ಹುಡುಗಿಗೆ ಗಾಯವಾಯಿತು. ಅದರಿಂದ ಆಕೆ ಜೋರಾಗಿ ಅಳಲು ಆರಂಭಿಸಿದಳು. ಆ ಇಬ್ಬರು ಪುಟ್ಟ ಹುಡುಗಿಯರು ನಿಜಕ್ಕೂ ಭಯಗೊಂಡಿದ್ದರು, ಯಾರಾದರೂ ನಮಗೆ ಈಗ ಗದರಿಸುವುದು ಖಚಿತ ಎಂದು ಅವರು ನಂಬಿದ್ದರು. ನಾನು ಮೂವರನ್ನೂ ಒಟ್ಟಿಗೆ ಕೂರಿಸಿದೆ ಮತ್ತು ಅವರ ನಡುವೆ ಆದ ಜಗಳದ ಬಗ್ಗೆ ಯಾವುದೆ ಪ್ರಸ್ತಾಪ ಮಾಡಲಿಲ್ಲ. ಆ ಇಬ್ಬರೂ ಹುಡುಗಿಯರು ಕೆಲಕಾಲ ಸುಮ್ಮನೇ ಕುಳಿತರು. ಅನಂತರ ಅವರು ಅಳುತ್ತಿರುವ ಮೂರನೇ ಹುಡುಗಿ ಜೊತೆ ಮಾತನಾಡುತ್ತಿರುವುದನ್ನು ಗಮನಿಸಿದೆ. ಅವರು ಏನು ಮಾತನಾಡಿದರು ಎಂಬುದನ್ನು ನಾನು ಕೇಳಿಸಿಕೊಳ್ಳಲಿಲ್ಲ. ಆದರೆ ಅವರ ಹಾವಭಾವವನ್ನು ನೋಡಿದರೆ ಅದು ಅವರ ನಡುವಿನ ಜಗಳಕ್ಕೆ ಸಂಬಂಧಿಸಿದ್ದಾಗಿರಲಿಲ್ಲ. ಅದಾದ ಬಳಿಕ ಇಡೀ ದಿನ ಮೂವರೂ ಮಕ್ಕಳು ಸ್ನೇಹಪೂರ್ಣವಾಗಿ ಜೊತೆ ಜೊತೆಯಲ್ಲೇ ಇದ್ದರು. ಮಕ್ಕಳಲ್ಲಿ ಇಂತಹ ವಿಚಾರಗಳು ಸಾಮಾನ್ಯ ಸಂಗತಿಯಾಗಿವೆ. ಇಂತಹ ಜಗಳಗಳನ್ನು ನಾನಾ ರೀತಿಯಲ್ಲಿ

ನಿಭಾಯಿಸಬಹುದಾಗಿದೆ. ಅಂತಹುದೊಂದು ಸಮಯದಲ್ಲಿ ಅವರನ್ನು ಚಿಂತನೆಗೆ ಹಚ್ಚಬೇಕು ಮತ್ತು ನಿಜಕ್ಕೂ ಅವರು ಮಾಡಿದ ತಪ್ಪುಗಳು ಏನು ಎಂಬುದನ್ನು ಯೋಚಿಸಲು ಅವಕಾಶ ಮಾಡಿಕೊಡಬೇಕು. ಕೊನೆಗೆ ತಾವು ಮಾಡಿದ್ದೇನೇನೂ ತಪ್ಪಲ್ಲ ಎಂಬುದು ಅರಿವಾಗುತ್ತದೆ. ಈ ರೀತಿಯ ಪ್ರಕ್ರಿಯೆ ಅತ್ಯಂತ ಉಪಯುಕ್ತ ಕೂಡ ಹೌದು. ಯಾಕೆಂದರೆ ಮಕ್ಕಳು ತಮ್ಮ ಬಗ್ಗೆ ಕಾಳಜಿ ವಹಿಸುವಷ್ಟು ಸಮರ್ಥರಾಗಿರುತ್ತಾರೆ. ಅವರು ಉದ್ದೇಶಪೂರ್ವಕವಾಗಿ ಹೊಡೆದಾಡಿಕೊಂಡಿದ್ದಲ್ಲ ಎಂಬುದು ನನ್ನ ಭಾವನೆಯಾಗಿತ್ತು. ಚಿಕ್ಕಮಕ್ಕಳು ಸಾಮಾನ್ಯವಾಗಿ ಸಮತೋಲನ ಕಾಯ್ದುಕೊಳ್ಳಲಾಗದೇ ಬಿದ್ದುಬಿಡುತ್ತವೆ. ಹಾಗಾಗಿ ಅವರು ಪರಸ್ಪರ ಗೊತ್ತಾಗದೆ ಡಿಕ್ಕಿ ಹೊಡೆಯಬಹುದು. ಈಗ ಅವರು ಯಾವುದೆ ಮಗು ಗಾಯಗೊಂಡರೆ ತತ್‌ಕ್ಷಣ 'ಸ್ಸಾರಿ' ಎಂದು ಹೇಳುತ್ತಾರೆ. ಇಡೀ ದಿನ ಅವರು ಒಬ್ಬರಿಗೊಬ್ಬರು ದೂರುತ್ತಿದ್ದುದು ಮಾತ್ರ ನಿಜ. ಹಾಗಂತ ಪ್ರತಿಯೊಂದು ಘಟನೆಯನ್ನೂ ಹೀಗೆ ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂಬುದೂ ಸತ್ಯ. ತನಗೇನಾದರೂ ಸಂಭವಿಸಿದರೆ ದೊಡ್ಡವರಾದವರು ವಿಚಾರಣೆ ಮಾಡುತ್ತಾರೆ ಎಂಬ ನಂಬಿಕೆ ಮಕ್ಕಳಿಗೆ ಇರಬೇಕು. ಆದರೆ ಸಣ್ಣಪುಟ್ಟ ಸಂಗತಿಗಳಿಗೆಲ್ಲ ಪ್ರತಿಕ್ರಿಯೆ ನೀಡಬೇಕಾದ ಅಗತ್ಯವೇನೂ ಇರುವುದಿಲ್ಲ. ಅವರ ಮೇಲೆ ನಂಬಿಕೆ ಇಟ್ಟರೆ ಅವರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎಂಬುದು ನಿಜ.

ಎರಡೂ ಕಡೆಯವರ ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಮಕ್ಕಳು ಪರಸ್ಪರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಆರಂಭಿಸುತ್ತಾರೆ. ಇನ್ನೊಂದು ದಿನ ಮಕ್ಕಳೆಲ್ಲರು ಸೇರಿ ಆಟವಾಡುತ್ತಿದ್ದರು. ಒಂದು ಆಟದಲ್ಲಿ, ಓಡುತ್ತ ಬಂದು ಬಾಯಿಯಿಂದ ಮಿಠಾಯಿ ತೆಗೆದುಕೊಂಡು ಮತ್ತೆ ಹಿಂದಕ್ಕೆ ಓಡಬೇಕು. ಒಂದು ಮಗುವಿಗೆ ಇದನ್ನು ಮಾಡಲು ಸಾಧ್ಯವಾಗಲಿಲ್ಲ. ಇನ್ನೊಂದು ಮಗು ಆಕೆಯ ಮಿಠಾಯಿ ಕಿತ್ತುಕೊಂಡು ಓಡಲು ಆರಂಭಿಸಿದಳು. ಇದರಿಂದ ಆಕೆ ತತ್‌ಕ್ಷಣ ಅಳಲು ಶುರುಮಾಡಿದಳು. ತತ್‌ಕ್ಷಣ ಇನ್ನಿಬ್ಬರು ಮಕ್ಕಳು ಓಡುತ್ತ ಬಂದು ಅವರ ಮಿಠಾಯಿಯನ್ನು ಆಕೆಗೆ ಕೊಟ್ಟು, "ನೀನು ಗೆದ್ದುಬಿಟ್ಟೆ... ನೀನು ಗೆದ್ದುಬಿಟ್ಟೆ" ಎಂದು ಜೋರಾಗಿ ಕೂಗತೊಡಗಿದರು. ಚಿಕ್ಕ ಮಕ್ಕಳು ಇತರರ ಭಾವನೆಗಳನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳುವ ಅರ್ಹತೆಯನ್ನು ಹೊಂದಿರುತ್ತಾರೆ.

ಮಕ್ಕಳು ಬೀಜಗಳಂತೆ. ಅವರಲ್ಲಿ ಸಂಪೂರ್ಣ ಸಾಮರ್ಥ್ಯವಿರುತ್ತದೆ. ನಾವು ಅವರಿಗೆ ಫಲವತ್ತಾದ ವಾತಾವರಣವನ್ನು ಕಲ್ಪಿಸಬೇಕು. ಇದರಿಂದ ಅವರು

ಪರಿಪೂರ್ಣವಾಗಿ ಅರಳಿಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕಾಗಿ ನಾವು ಬಾಲ್ಯವನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಿರುತ್ತದೆ.

**ನೇಹಾ** ಅವರು ಪ್ರಸ್ತುತ ಉತ್ತರಾಖಂಡದ ಉಧಮ್ ಸಿಂಗ್ ನಗರದ ಅಜೀಂ ಪ್ರೇಮ್ ಜಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಬಾಲ್ಯ, ಶಿಕ್ಷಕರು-ಮಕ್ಕಳ ಸಂಬಂಧ, ಸಮಾಜದ ನಿರ್ಮಾಣದಲ್ಲಿ ಬಾಲ್ಯದ ಪಾತ್ರ ಮತ್ತು ಮಕ್ಕಳ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದು ಅವರ ಆಸಕ್ತಿಯ ವಿಚಾರಗಳಾಗಿವೆ. ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ನೇಹಾ ಅವರು ವರದಿಗಾರಿಕೆ, ಬರವಣಿಗೆ ಮತ್ತು ಸಂಪಾದಕರಾಗಿ ನಾಲ್ಕು ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಹಿಂದಿ ರಾಷ್ಟ್ರೀಯ ದಿನಪತ್ರಿಕೆಗಳಾದ ಲಕ್ನೋದ ಅಮರ್ ಉಜಾಲಾ ಮತ್ತು ಡೆಹ್ರಾಡೂನ್ ನ ದೈನಿಕ್ ಜಾಗರಣ್ ನಲ್ಲಿ ಸೇವೆ ಸಲ್ಲಿಸಿದ್ದಾರೆ. ಬರವಣಿಗೆ ಮತ್ತು ಹಾಡು ಹಾಡುವುದೆಂದರೆ ಅವರಿಗೆ ತುಂಬ ಅಚ್ಚುಮೆಚ್ಚು. ಅವರನ್ನು - neha.mishra@azimpremjifoundation.org ಇಮೇಲ್ ಐಡಿಯಲ್ಲಿ ಸಂಪರ್ಕಿಸಬಹುದು.